ಅಥಣಿ ತಾಲ್ಲೂಕಿನ ಪ್ರಸಿದ್ಧ ದೇವಾಲಯಗಳನ್ನು ಯಾತ್ರಿನಿವಾಸವನ್ನಾಗಿ ಮಂಜೂರು ಮಾಡುವುದು

1930 (2409) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಅಥಣಿ ತಾಲ್ಲೂಕಿನ ಪ್ರಸಿದ್ಧ ದೇವಸ್ಥಾನಗಳಾದ ಕೊಕಟನೂರು ರೇಣುಕಾಯಲ್ಲಮ್ಮ, ರಾಮತೀರ್ಥ-ರಾಮೇಶ್ವರ, ಖಿಳೇಗಾಂವ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನಗಳಿಗೆ ಪ್ರತಿ ವರ್ಷ ಲಕ್ಷಗಟ್ಟಲೆ ಭಕ್ತಾದಿಗಳು ಆಗಮಿಸುತ್ತಿದ್ದು, ಇಲ್ಲಿ ಯಾತ್ರಿ ನಿವಾಸವನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಡಿ.ಬಿ.ಇನಾಂದರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಜಮೀನುಗಳ ಖರೀದಿ ಬಗ್ಗೆ

1931 (2410) ಶ್ರೀ ಡೊಂಗರಗಾಂವ ಷಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಮೀನುಗಳ ಖರೀದಿ (ನೋಂದಣಿ) ಮಾಡುವಾಗ ಮೊದಲು ಜಮೀನುಗಳ ಸರ್ವೆಮಾಡಿ ಭೂಮಾಪನ ಇಲಾಖೆಯಿಂದ ದಾಖಲೆಯನ್ನು ಪಡೆಯಬೇಕಾಗಿರುವ ಸ್ಥಿತಿಯಲ್ಲಿ ರೈತರಿಗೆ ತೀವ್ರ ತೊಂದರೆ ಹಾಗೂ ವಿಳಂಬವಾಗುತ್ತಿದ್ದು, ಖರೀದಿ ವ್ಯವಹಾರ ಕಡಿಮೆಯಾಗಿ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಇದನ್ನು ಸರಳೀಕರಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಜಮೀನುಗಳನ್ನು ಖರೀದಿಸುವಾಗ ಪರವಾನಿಗೆ ಸರ್ವೆಯರ್ ಇಂದ ಪಡೆದ ಸ್ಕೆಚ್ ಇಲ್ಲದೆ ನೊಂದಣಿ ಮಾಡಬಾರದು ಮತ್ತು ಇದು ಸಾರ್ವಜನಿಕ ನೀತಿಗೆ ವಿರೋಧ ಎಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ: ಕಂಇ 185 ಮೂನೋಮು 2001 ದಿನಾಂಕ: 20-8-2002ನ್ನು ರಿಟ್ ಪಿಟಿಷನ್ ನಂ.39906/2002 ಮತ್ತು 41909-41910/02ರ ದಿನಾಂಕ: 25-11-2002 ರಂದು ಮಾನ್ಯ ಕರ್ನಾಕ ಶ್ರೇಷ್ಟ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಇದಕ್ಕೆ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ. ಆದ್ದರಿಂದ ಮಾನ್ಯ ಶ್ರೇಷ್ಟ ನ್ಯಾಯಾಲಯದ ಆದೇಶದಂತೆ ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೂ ಹಾಗೂ ಉಪ ನೋಂದಣಾಧಿಕಾರಿಗಳಿಗೂ ಜಮೀನು ನೋಂದಣಿಗೆ ನಕಾಶೆ ವಗೈರೆ ಇಲ್ಲದೆ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದೆ. ಸದರಿ

ರಿಟ್ ಅರ್ಜಿಯಲ್ಲಿ ಶ್ರೇಷ್ಟ ನ್ಯಾಯಾಲಯದ ತೀರ್ಪು ಬಂದ ನಂತರ ಮುಂದಿನ ನಿರ್ಣಯ ತೆಗೆದುಕೊಳ್ಳಲಾಗುವುದು.

ಶಿರಹಟ್ಟಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿದ್ದನ್ನು ಸಕ್ರಮಗೊಳಿಸುವುದು

1932 (2456) ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಹಳ ದಿನಗಳಿಂದ ಶಿರಹಟ್ಟಿ ತಾಲ್ಲೂಕಿನ ಬಡ ರೈತರು ಅನೇಕ ಗ್ರಾಮಗಳಲ್ಲಿ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ, ಎಷ್ಟು ಜನ ರೈತರನ್ನು ಸರ್ಕಾರ ಗುರುತಿಸಿದೆ.

ಇ) ಸರ್ಕಾರ ಈ ಪ್ರಕಾರ ಅಕ್ರಮ ಸಾಗುವಳಿದಾರರನ್ನು ಗುರುತಿಸದೆ ಇದ್ದಲ್ಲಿ, ಇನ್ನು ಮುಂದೆ ಗುರುತಿಸಲಿಕ್ಕೆ ಸಾಧ್ಯವೇ?

ಈ) ಈ ಪ್ರಕಾರ ಅಕ್ರಮ ಸಾಗುವದಾರರನ್ನು ಸಕ್ರಮಗೊಳಿಸಲು ಸರಕಾರ ಅನುಸರಿಸುತ್ತಿರುವ ಮಾನದಂಡ ಏನು?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):

ಅ) ಹೌದು.

ಆ) ದಿನಾಂಕ: 27-4-78 ಕ್ಕಿಂತ ಪೂರ್ವದಲ್ಲಿ ಅತಿಕ್ರಮಣ ಮಾಡಿದವರು 96 ಜನ ರೈತರು, ದಿನಾಂಕ : 27-4-78ರ ನಂತರದಲ್ಲಿ ಅತಿಕ್ರಮಣ ಮಾಡಿದವರು 205 ಜನ ರೈತರು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ದಿನಾಂಕ:27-4-78ರ ಪೂರ್ವದಲ್ಲಿ ಆದ ಅರಣ್ಯ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಹೊರಡಿಸಿದ ದಿನಾಂಕ:5-5-97ರ ಸರ್ಕಾರ ಆದೇಶದಂತೆ ಮಾನದಂಡ ಈ ಕೆಳಕಂಡಂತಿದೆ:

1. ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರು ಮತ್ತು ಭೂ ರಹಿತ ಕೃಷಿಕರಿಗೆ ಹಾಗೂ ಅತಿ ಕಡಿಮೆ ಭೂಮಿ ಇರುವವರಿಗೆ ಸಕ್ರಮಗೊಳಿಸಲಾಗುತ್ತದೆ.

2. ಭೂ ರಹಿತ, ಸಣ್ಣ ರೈತ ಕುಟುಂಬದವರ ಯಾರದೇ ಹೆಸರಿನಲ್ಲಿ ಕೃಷಿ ಭೂಮಿ ಇರಕೂಡದು ಹಾಗೂ ವರ್ಷದ ಆದಾಯ ರೂ. 8000-00 ಮೀರಬಾರದು.

3. ಪ್ರತಿ ವ್ಯಕ್ತಿಗೆ 3 ಎಕರೆಗಿಂತ ಹೆಚ್ಚು, ಭೂಮಿಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

4. ದಿನಾಂಕ: 24-7-78ಕ್ಕಿಂತ ಹಿಂದೆ ಅತಿಕ್ರಮಣ ಮಾಡಿದ ಭೂಮಿಯನ್ನು, ಇತರರಿಗೆ ಮಾರಿರುವುದಾಗಲೀ, ಗೇಣಿ ಆಧಾರದ ಮೇಲೆ ಕೊಟ್ಟರುವುದಾಗಲೀ, ಬೇರೆ ಯಾವುದಾದರು ರೀತಿ ಕೊಟ್ಟಿರುವುದಾಗಲೀ, ಅಂತಹ ಅತಿಕ್ರಮಣಗಳನ್ನು ಸಕ್ರಮಗೊಳಿಸಬಾರದು.

5. ಈ ಮೇಲಿನಂತೆ, ಅತಿಕ್ರಮಣವನ್ನು ಸಕ್ರಮಗೊಳಿಸುವಾಗ, ಸಕ್ರಮಗೊಳಿಸಬೇಕಾದ ಅರಣ್ಯ ಪ್ರದೇಶದ ಅಕ್ಕ ಪಕ್ಕದ ಗ್ರಾಮದಲ್ಲಿ ಕೃಷಿ ಉದ್ದೇಶಕ್ಕಾಗಿ ನೀಡಿದ ಭೂಮಿಗೆ ನಿಗದೀಕರಿಸಿದ